185

42

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಸುಭಾಷ್ ತಂದೆ ಶಾಂತಪ್ಪ ಯಾದಗೀರ್, ಸ.ಕೃ.ಅ. ಮತ್ತು ಪ್ರಭಾರ ತಾಂತ್ರಿಕ ಸಹಾಯಕರು, ಸ.ಕೃ.ನಿ.ರ ಕಛೇರಿ, ರಾಯಚೂರು ಇವರ ವಿರುದ್ಧದ ಲೋಕಾಯುಕ್ತದ ದೂರು ಕುರಿತು.

ಓದಲಾಗಿದೆ: 1) ಅಪರ ನಿಬಂಧಕರು, ವಿಚಾರಣೆ-6, ಕರ್ನಾಟಕ ಲೋಕಾಯುಕ್ತ ಇವರ ಅ.ಸ.ಪ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ 138/2010/ಎಆರ್‌ಇ-6 ದಿನಾಂಕ:29-7-2011.

-0-

ಪ್ರಸ್ತಾವನೆ:-

ಮೇಲೆ ಓದಲಾಗಿರುವ ದಿನಾಂಕ:29-7-2011ರ ಪತ್ರದಲ್ಲಿ ಅಪರ ನಿಬಂಧಕರು, ವಿಚಾರಣೆ-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಶ್ರೀ ಸುಭಾಷ್, ತಂದೆ ಶಾಂತಪ್ಪ ಯಾದಗೀರ್, ಸಹಾಯಕ ಕೃಷಿ ಅಧಿಕಾರಿ ಮತ್ತು ಪ್ರಭಾರ ತಾಂತ್ರಿಕ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ಇವರ ವಿರುದ್ಧ ಶ್ರೀ ಸಂಗನಗೌಡ ಸನ್ ಆಫ್ ನಾಗರೆಡ್ಡಪ್ಪಗೌಡ, ಹೆಂಬೆರಲಾ ನಿವಾಸಿ, ರಾಯಚೂರು ಜಿಲ್ಲೆ ಇವರು ಕರ್ನಾಟಕ ಲೋಕಾಯುಕ್ತ ಅಧಿನಿಯಮ-1984ರಡಿ ಸಲ್ಲಿಸಿರುವ ದೂರಿನನ್ವಯ ಮಾನ್ಯ ಉಪ ಲೋಕಾಯುಕ್ತ, ಕರ್ನಾಟಕ ರಾಜ್ಯ ಬೆಂಗಳೂರು ಇವರು ತನಿಖೆ ನಡೆಸಿ, ನಿಯಮ-12 (3)ರಡಿ ಸಲ್ಲಿಸಿರುವ ತನಿಖಾ ವರದಿಯನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು ತಮ್ಮ ತನಿಖಾ ವರದಿಯಲ್ಲಿ ಶ್ರೀ ಸುಭಾಷ್ ತಂದೆ ಶಾಂತಪ್ಪ ಯಾದಗೀರ್, ಸಹಾಯಕ ಕೃಷಿ ಅಧಿಕಾರಿ ಇವರು ಪಿರ್ಯಾದುದಾರರಾದ ಶ್ರೀ ಸಂಗನಗೌಡ ಸನ್ ಆಫ್ ನಾಗರೆಡ್ಡಪ್ಪಗೌಡ, ಹೆಂಬೆರಲಾ ನಿವಾಸಿ, ರಾಯಚೂರು ಜಿಲ್ಲೆ ಇವರ ಸಹೋದರರಾದ ಶ್ರೀ ಬಸವರಾಜಪ್ಪ ಎಂಬುವವರು ಬಜಾಜ್ ಆಟೋಮೊಬೈಲ್ಸ್ ಸಿಂಧನೂರು ಇವರಿಂದ ರೂ.4.5 ಲಕ್ಷಗಳಿಗೆ ಖರೀದಿಸಿದ ಟ್ರ್ಯಾಕ್ಟರ್‌ಗೆ ಮಂಜೂರು ಮಾಡಿದ ಸಹಾಯಧನವನ್ನು ನೀಡಲು ರೂ.8,000-00ಗಳ ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತದ ಅಧಿಕಾರಿಗಳಿಗೆ ಸಿಕ್ಕಿಬಿದ್ದ ಪ್ರಯುಕ್ತ, ಸದರಿಯವರ ವಿರುದ್ಧ ಲಂಚ ನಿರೋಧಕ ಕಾಯ್ದೆ 1988ರ ಸೆಕ್ಷನ್-7 (13( (1) (ಡಿ)ನ್ನು ಓದುವುದರೊಂದಿಗೆ ಸೆಕ್ಷನ್-13 (2)ರಡಿಯಲ್ಲಿ ಪ್ರಕರಣವನ್ನು ಕ್ರಿಮಿನಲ್ ಸಂಖ್ಯೆ:6/2010ರನ್ವಯ ದಿನಾಂಕ:15-4-2010ರಂದು ಕರ್ನಾಟಕ ಲೋಕಾಯುಕ್ತ, ರಾಯಚೂರು ಇಲ್ಲಿ ದಾಖಲು ಮಾಡಿಕೊಳ್ಳಲಾಗಿದೆಯೆಂದು ವರದಿ ಮಾಡಿರುತ್ತಾರೆ, ಮತ್ತು ಸದರಿ ಅಧಿಕಾರಿಯವರು ಪಿರ್ಯಾದುದಾರರಿಂದ ಅಕ್ರಮವಾಗಿ ಸಂಭಾವನೆ ಪಡೆಯುವ ಬಗ್ಗೆ ಪಂಚನಾಮೆ ಮಾಡಲಾಗಿದೆಯೆಂದು ಹಾಗೂ ರಸಾಯನಿಕ ಪರೀಕ್ಷೆಗೆ ಒಳಪಡಿಸಲಾಗಿದೆಯೆಂದು ವರದಿ ಮಾಡಿ ಸದರಿ ಅಧಿಕಾರಿಯವರು ಎಸಗಿರುವ ಮೇಲ್ಕಂಡ ಆರೋಪ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ

...2.

1966ರ ನಿಯಮ-3 (1)ರ ಪ್ರಕಾರ ಸರ್ಕಾರಿ ನೌಕರರಿಗೆ ಸಲ್ಲದ ದುರ್ವರ್ತನೆಯಾಗಿರುತ್ತದೆ. ಆದ್ದರಿಂದ ಸದರಿ ಅಧಿಕಾರಿಯವರು ಎಸಗಿದ ಮೇಲ್ಕಂಡ ಆರೋಪಕ್ಕೆ ಸಂಭಂಧಿಸಿದಂತೆ ಅವರನ್ನು ಶಿಸ್ತುಕ್ರಮಕ್ಕೆ ಗುರಿಪಡಿಸಲು ಸದರಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿ 1957ರ ನಿಯಮ-14 (ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಸುಭಾಷ್, ತಂದೆ ಶಾಂತಪ್ಪ ಯಾದಗೀರ್, ಸಹಾಯಕ ಕೃಷಿ ಅಧಿಕಾರಿ ಮತ್ತು ಪ್ರಭಾರ ತಾಂತ್ರಿಕ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ಇವರ ವಿರುದ್ಧ ಆರೋಪಕ್ಕೆ ಸಂಬಂಧಿಸಿದಂತೆ ಅವರನ್ನು ಶಿಸ್ತುಕ್ರಮಕ್ಕೆ ಗುರಿಪಡಿಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಅದೇಶ ಸಂಖ್ಯೆ:ಕೃತೋಇ 44 ಕೃಪವಿ 2011**
**ಬೆಂಗಳೂರು, ದಿನಾಂಕ: 8-11-2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಸುಭಾಷ್, ತಂದೆ ಶಾಂತಪ್ಪ ಯಾದಗೀರ್, ಸಹಾಯಕ ಕೃಷಿ ಅಧಿಕಾರಿ ಮತ್ತು ಪ್ರಭಾರ ತಾಂತ್ರಿಕ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ರಾಯಚೂರು ಇವರನ್ನು ಅವರು ಎಸಗಿರುವ ದುರ್ವರ್ತನೆಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ-1957ರ ನಿಯಮ-11ರಡಿಯಲ್ಲಿ ಶಿಸ್ತುಕ್ರಮಕ್ಕೆ ಗುರಿಪಡಿಸಲು ಅದೇ ನಿಯಮಾವಳಿ ನಿಯಮ-14 (ಎ)ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕಪತ್ರ ತಪಾಸಣೆ) ಕರ್ನಾಟಕ, ಬೆಂಗಳೂರು
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಅಪರ ನಿಬಂಧಕರು, ವಿಚಾರಣೆ-6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಜಂಟಿ ಕೃಷಿ ನಿರ್ದೇಶಕರು, ರಾಯಚೂರು
5) ಸಹಾಯಕ ಕೃಷಿ ನಿರ್ದೇಶಕರು, ರಾಯಚೂರು
6) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
7) ಸಂಬಂಧಪಟ್ಟ ಅಧಿಕಾರಿಗೆ (ಕೃಷಿ ಆಯುಕ್ತರ ಮೂಲಕ)
8) ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ
9) ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಸಹಾಯಕರಿಗೆ
10) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಆಪ್ತ ಸಹಾಯಕರಿಗೆ
11) S.G.F.